ನಿರ್ದೇಶಕರ ಕಛೇರಿ
ಅಲ್ಪಸಂಖ್ಯಾತರ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080-22864212.
ಫ್ಯಾಕ್ಸ್: 080-22863618.
ಸಹಾಯವಾಣಿ 8277799990
Email:directorgokdom@gmail.com
Web: www.dom.karnataka.gov.in
ನಂ:16ಸಿ ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ,
ವಸಂತನಗರ, ಬೆಂಗಳೂರು-560052

**ಸಂಖ್ಯೆ:ಅ.ಸಂ.ನಿ/ಆಡಳಿತ(ಪ.ಪೂ)ಸಿಆರ್-60/2022-23** **ದಿನಾಂಕ:11.07.2022**

# "ಅಧಿಕೃತ ಜ್ಞಾಪನ"

ವಿಷಯ: ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಪರೀಕ್ಷಾ ಪೂರ್ವ ಅವಧಿ ಘೋಷಣೆ ಕುರಿತು.

ಉಲ್ಲೇಖ: ನಿರ್ದೇಶನಾಲಯದ ಪತ್ರ ಸಂಖ್ಯೆ: ಅಸಂನಿ/ಆಡಳಿತ(ಪ.ಪೂ)/ಸಿಆರ್-60/2022-23, ದಿನಾಂಕ:22.06.2022.

*****

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಲ್ಪಸಂಖ್ಯಾತರ ನಿರ್ದೇಶನಾಲಯದಡಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಅಧಿಕಾರಿ/ನೌಕರರು ಪರೀಕ್ಷಾ ಪೂರ್ವ ಅವಧಿ ಮುಕ್ತಾಯಗೊಂಡು ಇನ್ನು ಘೋಷಣೆಯಾಗದಿರುವುದು ಕಂಡುಬಂದಿರುತ್ತದೆ. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ ಇವರು ಪರೀಕ್ಷಾ ಪೂರ್ವ ಅವಧಿ ಮುಕ್ತಾಯಗೊಂಡಿರುವ ಅಧಿಕಾರಿ/ನೌಕರರ ಪರೀಕ್ಷಾ ಪೂರ್ವ ಅವಧಿಯನ್ನು ವಿಳಂಭವಿಲ್ಲದೆ ಸಕಾಲದಲ್ಲಿ ಘೋಷಿಸುವಂತೆ ಸೂಚಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ನಿರ್ದೇಶನಾಲಯದ ಉಲ್ಲೇಖಿತ ಪತ್ರದ ಮೂಲಕ ಹಾಗೂ ದಿನಾಂಕ:23.06.2022ರಂದು ಜೂಮ್ ಮೂಲಕ ನಡೆಸಲಾದ ಜಿಲ್ಲಾ ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಿದಂತೆ ಪರೀಕ್ಷಾ ಪೂರ್ವ ಅವಧಿ ಘೋಷಣೆಯಾಗಿರುವ/ಘೋಷಣೆಯಾಗದಿರುವ ಅಧಿಕಾರಿ/ನೌಕರರ ವಿವರಗಳನ್ನು ಜಿಲ್ಲಾ ಅಧಿಕಾರಿಗಳಿಂದ ಪಡೆಯಲಾಗಿರುತ್ತದೆ.

ಅದರನ್ವಯ ಅಲ್ಪಸಂಖ್ಯಾತರ ನಿರ್ದೇಶನಾಲಯದಡಿಯಲ್ಲಿ ಒಟ್ಟು 1994 ಅಧಿಕಾರಿ/ನೌಕರರು ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತದವರೆಗೆ 872 ಅಧಿಕಾರಿ/ನೌಕರರ ಪರೀಕ್ಷಾ ಪೂರ್ವ ಅವಧಿಯನ್ನು ಘೋಷಣೆ ಮಾಡಲಾಗಿರುತ್ತದೆ (ಅನುಬಂಧ-1). ಇನ್ನುಳಿದ 16 ನೌಕರರು ಇಲಾಖಾ ಪರೀಕ್ಷೆಯಲ್ಲಿ ತೇರ್ಗಡೆಹೊಂದಿಲ್ಲದ ಕಾರಣ (ಅನುಬಂಧ-2) ಮತ್ತು ಒಬ್ಬ ನೌಕರರ ಇಲಾಖಾ ವಿಚಾರಣೆ ಬಾಕಿ ಇರುವುದರಿಂದ ಪರೀಕ್ಷಾ ಪೂರ್ವ ಅವಧಿ ಘೋಷಿಸಲು ಅರ್ಹರಿರುವುದಿಲ್ಲ (ಅನುಬಂಧ-3). 127 ನೌಕರರ ಪರೀಕ್ಷಾ ಪೂರ್ವ ಅವಧಿ ಘೋಷಿಸಲು ಅರ್ಹರಿರುತ್ತಾರೆ (ಅನುಬಂಧ-4). ಉಳಿದಂತೆ 978 ನೌಕರರು ಹೊಸದಾಗಿ ನೇಮಕಾತಿ ಹೊಂದಿರುವುದರಿಂದ ಇವರ ಪರೀಕ್ಷಾ ಪೂರ್ವ ಅವಧಿ ಪೂರ್ಣಗೊಂಡಿರುವುದಿಲ್ಲ.

**ಮುಂದುವರೆದು, ಅನುಬಂಧ-1 ರಿಂದ 4ರವರೆಗೆ ಮಾಹಿತಿಗಳನ್ನು ಈ ಅಧಿಕೃತ ಜ್ಞಾಪನದೊಂದಿಗೆ ಲಗತ್ತಿಸಿ ಪ್ರಕಟಿಸಲಾಗಿದೆ ಹಾಗೂ ನಿರ್ದೇಶನಾಲಯದ ವೆಬ್‌ಸೈಟ್ dom.karnataka.gov.in ನಲ್ಲಿಯೂ ಪ್ರಕಟಿಸಲಾಗಿದೆ.**

....2

ಸದರಿ ಅನುಬಂಧಗಳಲ್ಲಿನ ಮಾಹಿತಿಗಳ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಅಂತಹ ಆಕ್ಷೇಪಣೆಗಳನ್ನು ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳ ಮೂಲಕ ದಿನಾಂಕ:18.07.2022ರೊಳಗಾಗಿ ನಿರ್ದೇಶನಾಲಯಕ್ಕೆ ಸಲ್ಲಿಸುವಂತೆ ಸೂಚಿಸಿದೆ.

ಮುಂದುವರೆದು ಅನುಬಂಧ-4ರಲ್ಲಿನ ಪರೀಕ್ಷಾ ಪೂರ್ವ ಅವಧಿ ಘೋಷಣೆಯಾಗದಿರುವ ಅರ್ಹ ನೌಕರರ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳು ನಿಯಮಾನುಸಾರ ಪರಿಶೀಲಿಸಿ ಎಲ್ಲಾ ಅರ್ಹತೆಗಳನ್ನು ಪೂರೈಸಿರುವ ಬಗ್ಗೆ ಖಚಿತಪಡಿಸಿಕೊಂಡು ಅಗತ್ಯ ದಾಖಲೆಗಳೊಂದಿಗೆ ದಿನಾಂಕ:25.07.2022ರೊಳಗಾಗಿ ನಿರ್ದೇಶನಾಲಯಕ್ಕೆ ಕಳುಹಿಸಿಕೊಡುವಂತೆ ಸೂಚಿಸಿದೆ.

ತಮ್ಮ ವಿಶ್ವಾಸಿ,

11/07/2022

ನಿರ್ದೇಶಕರು,
ಅಲ್ಪಸಂಖ್ಯಾತರ ನಿರ್ದೇಶನಾಲಯ,
ಬೆಂಗಳೂರು.

**ಪ್ರತಿಯನ್ನು:-**

1. ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಜಂಟಿ ನಿರ್ದೇಶಕರು, ಉಪ ನಿರ್ದೇಶಕರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೆಕ್ಕಾಧಿಕಾರಿ, ಎಲ್ಲಾ ಸಹಾಯಕ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು.
3. ಎಲ್ಲಾ ಪ್ರಾಂಶುಪಾಲರು/ಮುಖ್ಯೋಪಾಧ್ಯಾಯರು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜು/ಮಾದರಿ ವಸತಿ ಶಾಲೆ/ಸರ್ಕಾರಿ ಮುಸ್ಲಿಂ ವಸತಿ ಶಾಲೆ/ಮೌಲಾನಾ ಆಜಾದ್ ಮಾದರಿ ಶಾಲೆ - ಸೂಕ್ತ ಕ್ರಮಕ್ಕಾಗಿ.
4. ಸಹಾಯವಾಣಿ ಕೇಂದ್ರ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ವಸಂತನಗರ, ಬೆಂಗಳೂರು.
5. ಕಛೇರಿ ಪ್ರತಿ.
6. ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ. - ಸೂಕ್ತ ಕ್ರಮಕ್ಕಾಗಿ.